ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ

(ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ)

E-Mail :- pdchikkaballapur@gmail.com Ph:-08156-295230

ಸಂಖ್ಯೆ:ಜಿನಕೋ:ಚಿಸಿ(2):ಆರ್:198:2022-23 ದಿನಾಂಕ:13-01-2023

## "ಅಧಿಸೂಚನೆ"

**ವಿಷಯ:** ಚಿಕ್ಕಬಳ್ಳಾಪುರ ಜಿಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಇರುವ ನೇರ ನೇಮಕಾತಿ ಪೌರಕಾರ್ಮಿಕ ಹುದ್ದೆಗಳನ್ನು ಕರ್ನಾಟಕ ಪುರಸಭೆಗಳ (ನಗರಸಭೆ, ಪುರಸಭೆಗಳು ಮತ್ತು ಪಟ್ಟಣ ಪಂಚಾಯಿತಿಗಳ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು-2022 ರ ರೀತ್ಯಾ ನೇಮಕಾತಿ ಮಾಡುವ ಬಗ್ಗೆ.

**ಉಲ್ಲೇಖ:**
1. ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ಪತ್ರದ ಸಂಖ್ಯೆ: 829105/ಡಿಎಂಎ/ಇಎಸ್‌ಟಿ-2/ಓಟಿಹೆಚ್/09/2022 ದಿ:09.01.2023.
2. ಮಾನ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 176 ಜಿ.ಇ.ಎಲ್ 2022 (ಭಾ-2) (ಇ) ಬೆಂಗಳೂರು ದಿನಾಂಕ:23.11.2022.

*~*~*~*~*~

ಉಲ್ಲೇಖ(1) ಮತ್ತು (2)ರ ಆದೇಶದಂತೆ, ಚಿಕ್ಕಬಳ್ಳಾಪುರ ಜಿಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಇರುವ ನೇರ ನೇಮಕಾತಿ ಪೌರಕಾರ್ಮಿಕರ ಹುದ್ದೆಗಳನ್ನು **ಕರ್ನಾಟಕ ಪುರಸಭೆಗಳ (ನಗರಸಭೆ, ಪುರಸಭೆಗಳು ಮತ್ತು ಪಟ್ಟಣ ಪಂಚಾಯಿತಿಗಳ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು-2022 ರ ರೀತ್ಯಾ** ಭರ್ತಿ ಮಾಡಲು ಆಸಕ್ತಿವುಳ್ಳ ಅರ್ಹ ಅಭ್ಯರ್ಥಿಗಳಿಂದ ನಿಗಧಿತ ನಮೂನೆಯಲ್ಲಿ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

**ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವ ಕಾಲಮಿತಿ**

| ವಿವರ | ದಿನಾಂಕ | ಅರ್ಜಿ ನಮೂನೆ ಪಡೆಯುವ ವಿಳಾಸ |
|---|---|---|
| ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಪ್ರಾರಂಭಿಕ ದಿನಾಂಕ | 13-01-2023 | **ನಗರಸಭೆ:** ಚಿಕ್ಕಬಳ್ಳಾಪುರ/ಚಿಂತಾಮಣಿ/ಶಿಡ್ಲಘಟ್ಟ/ಗೌರಿಬಿದನೂರು.<br>**ಪುರಸಭೆ:** ಬಾಗೇಪಲ್ಲಿ.<br>**ಪಟ್ಟಣ ಪಂಚಾಯಿತಿ:** ಗುಡಿಬಂಡೆ. |
| ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 11-02-2023 | |

| ಹುದ್ದೆಯ ವಿವರ ಹಾಗೂ ವೇತನ ಶ್ರೇಣಿ | ಲಭ್ಯವಿರುವ ಹುದ್ದೆಗಳು | ಕನಿಷ್ಠ ವಿದ್ಯಾರ್ಹತೆ |
|---|---|---|
| **ಪೌರಕಾರ್ಮಿಕ**<br>17000-28950 | ಪೌರಕಾರ್ಮಿಕ ಒಟ್ಟು ಹುದ್ದೆಗಳ ಸಂಖ್ಯೆ:102 | 1. ಕನ್ನಡ ಮಾತನಾಡಲು ಗೊತ್ತಿರಬೇಕು<br>2. ಪೌರಕಾರ್ಮಿಕ ಹುದ್ದೆಯಲ್ಲಿ ಕೆಲಸ ಮಾಡುತ್ತಿರುವ ಹಾಲಿ ನೇರಪಾವತಿ, ಕ್ಷೇಮಾಭಿವೃದ್ಧಿ ಅಥವಾ ದಿನಗೂಲಿ ಅಥವಾ ಗುತ್ತಿಗೆ ಅಥವಾ ಸಮಾನ ಕೆಲಸಕ್ಕೆ ಸಮಾನ ವೇತನ ಅಥವಾ ಹೊರಗುತ್ತಿಗೆ ನೌಕರರು ಮಾತ್ರ.<br>3. ಗರಿಷ್ಠ ವಯೋಮಿತಿ 55 ವರ್ಷ. |

## ಹುದ್ದೆಗಳ ವರ್ಗೀಕರಣ:

**ಚಿಕ್ಕಬಳ್ಳಾಪುರ ನಗರಸಭೆ: 15 ಪೌರಕಾರ್ಮಿಕ ಹುದ್ದೆಗಳಿಗೆ ಮೀಸಲಿರಿಸಿದ ವರ್ಗ.**

| ಮೀಸಲಾತಿ | ಸಾಮಾನ್ಯ ಅಭ್ಯರ್ಥಿ | ಮಹಿಳೆ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕರು | ಯೋಜನಾ ನಿರಾಶ್ರಿತರು | ಕನ್ನಡ ಮಾಧ್ಯಮ | ಅಂಗವಿಕಲರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|
| ಪರಿಶಿಷ್ಟ ಜಾತಿ | 1 | 1 | 1 | 0 | 0 | 0 | 0 | 0 | 3 |
| ಪರಿಶಿಷ್ಟ ಪಂಗಡ | 1 | 0 | 0 | 0 | 0 | 0 | 0 | 0 | 1 |
| ಪ್ರವರ್ಗ-1 | 1 | 0 | 0 | 0 | 0 | 0 | 0 | 0 | 1 |
| ಪ್ರವರ್ಗ-2 (ಎ) | 1 | 1 | 0 | 0 | 0 | 0 | 0 | 0 | 2 |
| ಪ್ರವರ್ಗ-2 (ಬಿ) | 1 | 0 | 0 | 0 | 0 | 0 | 0 | 0 | 1 |
| ಪ್ರವರ್ಗ-3 (ಎ) | 0 | 0 | 0 | 0 | 0 | 0 | 0 | 0 | 0 |
| ಪ್ರವರ್ಗ-3(ಬಿ) | 0 | 0 | 0 | 0 | 0 | 0 | 0 | 0 | 0 |
| ಸಾಮಾನ್ಯ ಅಭ್ಯರ್ಥಿ | 2 | 2 | 2 | 0 | 0 | 0 | 1 | 0 | 7 |
| **ಒಟ್ಟು** | **7** | **4** | **3** | **0** | **0** | **0** | **1** | **0** | **15** |

**ಚಿಂತಾಮಣಿ ನಗರಸಭೆ: 19 ಪೌರಕಾರ್ಮಿಕ ಹುದ್ದೆಗಳಿಗೆ ಮೀಸಲಿರಿಸಿದ ವರ್ಗ.**

| ಮೀಸಲಾತಿ | ಸಾಮಾನ್ಯ ಅಭ್ಯರ್ಥಿ | ಮಹಿಳೆ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕರು | ಯೋಜನಾ ನಿರಾಶ್ರಿತರು | ಕನ್ನಡ ಮಾಧ್ಯಮ | ಅಂಗವಿಕಲರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|
| ಪರಿಶಿಷ್ಟ ಜಾತಿ | 1 | 1 | 1 | 0 | 0 | 0 | 0 | 0 | 3 |
| ಪರಿಶಿಷ್ಟ ಪಂಗಡ | 1 | 1 | 0 | 0 | 0 | 0 | 0 | 0 | 2 |
| ಪ್ರವರ್ಗ-1 | 1 | 0 | 0 | 0 | 0 | 0 | 0 | 0 | 1 |
| ಪ್ರವರ್ಗ-2 (ಎ) | 1 | 1 | 0 | 0 | 0 | 0 | 0 | 0 | 2 |
| ಪ್ರವರ್ಗ-2 (ಬಿ) | 1 | 0 | 0 | 0 | 0 | 0 | 0 | 0 | 1 |
| ಪ್ರವರ್ಗ-3 (ಎ) | 1 | 0 | 0 | 0 | 0 | 0 | 0 | 0 | 1 |
| ಪ್ರವರ್ಗ-3(ಬಿ) | 1 | 0 | 0 | 0 | 0 | 0 | 0 | 0 | 1 |
| ಸಾಮಾನ್ಯ ಅಭ್ಯರ್ಥಿ | 2 | 3 | 2 | 0 | 0 | 0 | 1 | 0 | 8 |
| **ಒಟ್ಟು** | **9** | **6** | **3** | **0** | **0** | **0** | **1** | **0** | **19** |

**ಶಿಡ್ಲಘಟ್ಟ ನಗರಸಭೆ: 25 ಪೌರಕಾರ್ಮಿಕ ಹುದ್ದೆಗಳಿಗೆ ಮೀಸಲಿರಿಸಿದ ವರ್ಗ.**

| ಮೀಸಲಾತಿ | ಸಾಮಾನ್ಯ ಅಭ್ಯರ್ಥಿ | ಮಹಿಳೆ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕರು | ಯೋಜನಾ ನಿರಾಶ್ರಿತರು | ಕನ್ನಡ ಮಾಧ್ಯಮ | ಅಂಗವಿಕಲರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|
| ಪರಿಶಿಷ್ಟ ಜಾತಿ | 1 | 1 | 1 | 0 | 0 | 0 | 1 | 0 | 4 |
| ಪರಿಶಿಷ್ಟ ಪಂಗಡ | 1 | 1 | 0 | 0 | 0 | 0 | 0 | 0 | 2 |
| ಪ್ರವರ್ಗ-1 | 1 | 0 | 0 | 0 | 0 | 0 | 0 | 0 | 1 |
| ಪ್ರವರ್ಗ-2 (ಎ) | 1 | 1 | 1 | 0 | 0 | 0 | 1 | 0 | 4 |
| ಪ್ರವರ್ಗ-2 (ಬಿ) | 1 | 0 | 0 | 0 | 0 | 0 | 0 | 0 | 1 |
| ಪ್ರವರ್ಗ-3 (ಎ) | 1 | 0 | 0 | 0 | 0 | 0 | 0 | 0 | 1 |

| | | | | | | | | | |
|---|---|---|---|---|---|---|---|---|---|
| ಪ್ರವರ್ಗ–3(ಬಿ) | 1 | ೦ | ೦ | ೦ | ೦ | ೦ | ೦ | ೦ | 1 |
| ಸಾಮಾನ್ಯ ಅಭ್ಯರ್ಥಿ | 3 | 3 | 3 | 1 | ೦ | ೦ | 1 | ೦ | 11 |
| **ಒಟ್ಟು** | **10** | **6** | **5** | **1** | **೦** | **೦** | **3** | **೦** | **25** |

**ಗೌರಿಬಿದನೂರು ನಗರಸಭೆ: 22 ಪೌರಕಾರ್ಮಿಕ ಹುದ್ದೆಗಳಿಗೆ ಮೀಸಲಿರಿಸಿದ ವರ್ಗ.**

| ಮೀಸಲಾತಿ | ಸಾಮಾನ್ಯ ಅಭ್ಯರ್ಥಿ | ಮಹಿಳೆ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕರು | ಯೋಜನಾ ನಿರಾಶ್ರಿತರು | ಕನ್ನಡ ಮಾಧ್ಯಮ | ಅಂಗವಿಕಲರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|
| ಪರಿಶಿಷ್ಟ ಜಾತಿ | 1 | 1 | 1 | ೦ | ೦ | ೦ | ೦ | ೦ | 3 |
| ಪರಿಶಿಷ್ಟ ಪಂಗಡ | 1 | 1 | ೦ | ೦ | ೦ | ೦ | ೦ | ೦ | 2 |
| ಪ್ರವರ್ಗ–1 | 1 | ೦ | ೦ | ೦ | ೦ | ೦ | ೦ | ೦ | 1 |
| ಪ್ರವರ್ಗ–2 (ಎ) | 1 | 1 | 1 | ೦ | ೦ | ೦ | ೦ | ೦ | 3 |
| ಪ್ರವರ್ಗ–2 (ಬಿ) | 1 | ೦ | ೦ | ೦ | ೦ | ೦ | ೦ | ೦ | 1 |
| ಪ್ರವರ್ಗ–3 (ಎ) | 1 | ೦ | ೦ | ೦ | ೦ | ೦ | ೦ | ೦ | 1 |
| ಪ್ರವರ್ಗ–3(ಬಿ) | 1 | ೦ | ೦ | ೦ | ೦ | ೦ | ೦ | ೦ | 1 |
| ಸಾಮಾನ್ಯ ಅಭ್ಯರ್ಥಿ | 2 | 3 | 3 | 1 | ೦ | ೦ | 1 | ೦ | 10 |
| **ಒಟ್ಟು** | **9** | **6** | **5** | **1** | **೦** | **೦** | **1** | **೦** | **22** |

**ಬಾಗೇಪಲ್ಲಿ ಪುರಸಭೆ: 12 ಪೌರಕಾರ್ಮಿಕ ಹುದ್ದೆಗಳಿಗೆ ಮೀಸಲಿರಿಸಿದ ವರ್ಗ.**

| ಮೀಸಲಾತಿ | ಸಾಮಾನ್ಯ ಅಭ್ಯರ್ಥಿ | ಮಹಿಳೆ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕರು | ಯೋಜನಾ ನಿರಾಶ್ರಿತರು | ಕನ್ನಡ ಮಾಧ್ಯಮ | ಅಂಗವಿಕಲರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|
| ಪರಿಶಿಷ್ಟ ಜಾತಿ | 1 | 1 | ೦ | ೦ | ೦ | ೦ | ೦ | ೦ | 2 |
| ಪರಿಶಿಷ್ಟ ಪಂಗಡ | 1 | ೦ | ೦ | ೦ | ೦ | ೦ | ೦ | ೦ | 1 |
| ಪ್ರವರ್ಗ–1 | 1 | ೦ | ೦ | ೦ | ೦ | ೦ | ೦ | ೦ | 1 |
| ಪ್ರವರ್ಗ–2 (ಎ) | 1 | ೦ | ೦ | ೦ | ೦ | ೦ | ೦ | ೦ | 1 |
| ಪ್ರವರ್ಗ–2 (ಬಿ) | 1 | ೦ | ೦ | ೦ | ೦ | ೦ | ೦ | ೦ | 1 |
| ಪ್ರವರ್ಗ–3 (ಎ) | ೦ | ೦ | ೦ | ೦ | ೦ | ೦ | ೦ | ೦ | ೦ |
| ಪ್ರವರ್ಗ–3(ಬಿ) | ೦ | ೦ | ೦ | ೦ | ೦ | ೦ | ೦ | ೦ | ೦ |
| ಸಾಮಾನ್ಯ ಅಭ್ಯರ್ಥಿ | 1 | 2 | 2 | ೦ | ೦ | ೦ | 1 | ೦ | 6 |
| **ಒಟ್ಟು** | **6** | **3** | **2** | **೦** | **೦** | **೦** | **1** | **೦** | **12** |

**ಗುಡಿಬಂಡೆ ಪಟ್ಟಣ ಪಂಚಾಯಿತಿ: ೦9 ಪೌರಕಾರ್ಮಿಕ ಹುದ್ದೆಗಳಿಗೆ ಮೀಸಲಿರಿಸಿದ ವರ್ಗ.**

| ಮೀಸಲಾತಿ | ಸಾಮಾನ್ಯ ಅಭ್ಯರ್ಥಿ | ಮಹಿಳೆ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕರು | ಯೋಜನಾ ನಿರಾಶ್ರಿತರು | ಕನ್ನಡ ಮಾಧ್ಯಮ | ಅಂಗವಿಕಲರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|
| ಪರಿಶಿಷ್ಟ ಜಾತಿ | 1 | 1 | ೦ | ೦ | ೦ | ೦ | ೦ | ೦ | 2 |
| ಪರಿಶಿಷ್ಟ ಪಂಗಡ | 1 | ೦ | ೦ | ೦ | ೦ | ೦ | ೦ | ೦ | 1 |
| ಪ್ರವರ್ಗ–1 | 1 | ೦ | ೦ | ೦ | ೦ | ೦ | ೦ | ೦ | 1 |
| ಪ್ರವರ್ಗ–2 (ಎ) | 1 | ೦ | ೦ | ೦ | ೦ | ೦ | ೦ | ೦ | 1 |

| | | | | | | | | | |
|---|---|---|---|---|---|---|---|---|---|
| ಪ್ರವರ್ಗ-2 (ಬಿ) | ೦ | ೦ | ೦ | ೦ | ೦ | ೦ | ೦ | ೦ | ೦ |
| ಪ್ರವರ್ಗ-3 (ಎ) | ೦ | ೦ | ೦ | ೦ | ೦ | ೦ | ೦ | ೦ | ೦ |
| ಪ್ರವರ್ಗ-3(ಬಿ) | ೦ | ೦ | ೦ | ೦ | ೦ | ೦ | ೦ | ೦ | ೦ |
| ಸಾಮಾನ್ಯ ಅಭ್ಯರ್ಥಿ | 1 | 1 | 1 | ೦ | ೦ | ೦ | 1 | ೦ | 4 |
| **ಒಟ್ಟು** | **5** | **2** | **1** | **೦** | **೦** | **೦** | **1** | **೦** | **9** |

**ಅನ್ವಯಿಸುವ ಷರಾ:-**

1. ನೇಮಕಾತಿಯಲ್ಲಿನ ಆದ್ಯತೆಯನ್ನು ನೇರಪಾವತಿ, ಕ್ಷೇಮಾಭಿವೃದ್ಧಿ, ಅಥವಾ ದಿನಗೂಲಿ ಅಥವಾ ಗುತ್ತಿಗೆ ಅಥವಾ ಸಮಾನ ಕೆಲಸಕ್ಕೆ ಸಮಾನ ವೇತನ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಅನುಕ್ರಮವಾಗಿ ಪರಿಗಣಿಸಲಾಗುವುದು.
2. ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ನೇರಪಾವತಿ, ಕ್ಷೇಮಾಭಿವೃದ್ಧಿ, ಅಥವಾ ದಿನಗೂಲಿ ಅಥವಾ ಗುತ್ತಿಗೆ ಅಥವಾ ಸಮಾನ ಕೆಲಸಕ್ಕೆ ಸಮಾನ ವೇತನ ಅಥವಾ ಹೊರಗುತ್ತಿಗೆ ಅಥವಾ ಲೋಡರ್ಸ್ ಅಥವಾ ಕ್ಲೀನರ್ಸ್ ಆದಾರದಲ್ಲಿ 2 ವರ್ಷಕ್ಕಿಂತ ಕಡಿಮೆ ಇಲ್ಲದಂತೆ ನಿರಂತರವಾಗಿ ಕೆಲಸ ನಿರ್ವಹಿಸುತ್ತಿರುವ ಹಾಗೂ ಈ ನಿಯಮ ಜಾರಿಗೆ ಬಂದ ದಿನಾಂಕದಲ್ಲಿಯೂ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಆದ್ಯತೆ ನೀಡಲಾಗುವುದು.
3. ಹಾಲಿ ನೇರಪಾವತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ **ಪೌರಕಾರ್ಮಿಕರನ್ನು ವಯಸ್ಸಿನ ಜೇಷ್ಟತೆಯ ಆಧಾರದ ಮೇಲೆ (ಅವರ ವಯಸ್ಸಿಗೆ ಅನುಗುಣವಾಗಿ ಅಂದರೆ ಹೆಚ್ಚು ವಯಸ್ಕರನ್ನು ಕಡಿಮೆ ವಯಸ್ಕರಿಗಿಂತ ಮೇಲೆ ಪರಿಗಣಿಸಲಾಗುವುದು. ವಯಸ್ಸು ಮತ್ತು ಸಲ್ಲಿಸಿರುವ ಸೇವೆ ಒಂದೇ ತೆರನಾಗಿದ್ದರೆ, ಲಾಟರಿ ಮೂಲಕ ಪರಿಗಣಿಸಲಾಗುವುದು.)**
4. ಹಾಲಿ ಕ್ಷೇಮಾಭಿವೃದ್ಧಿ, ಅಥವಾ ದಿನಗೂಲಿ ಅಥವಾ ಗುತ್ತಿಗೆ ಅಥವಾ ಸಮಾನ ಕೆಲಸಕ್ಕೆ ಸಮಾನ ವೇತನ ಅಥವಾ ಹೊರಗುತ್ತಿಗೆ ಅಥವಾ ಲೋಡರ್ಸ್ ಅಥವಾ ಕ್ಲೀನರ್ಸ್ ಆಧಾರದಲ್ಲಿ **2 ವರ್ಷಕ್ಕಿಂತ ಕಡಿಮೆ ಇಲ್ಲದಂತೆ ನಿರಂತರವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರುಗಳನ್ನು ಸೇವೆಗೆ ಸೇರಿದ ಜೇಷ್ಠತೆಯ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.**

**ಅಭ್ಯರ್ಥಿಗಳಿಗೆ ಸೂಚನೆ ಮತ್ತು ಷರತ್ತುಗಳು :**

1. ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡುವ ಮೊದಲು ಅಧಿಸೂಚನೆಯಲ್ಲಿ ನೀಡಿರುವ ಅರ್ಜಿ ಭರ್ತಿ ಮಾಡುವ ಕುರಿತ ಸೂಚನೆಗಳು ಅರ್ಹತಾ ಷರತ್ತುಗಳನ್ನು ಓದಿಕೊಳ್ಳತಕ್ಕದ್ದು, ನೇಮಕಾತಿ ಪ್ರಾಧಿಕಾರವು ದೃಢೀಕರಿಸಿ ನೀಡಿರುವ ಹುದ್ದೆಗಳ ಮೀಸಲಾತಿಗೆ ಸಂಬಂಧಿಸಿದ ಅಂಕಣದಲ್ಲಿ ಉಪಯೋಗಿಸಿದ ಪದಗಳ ಅರ್ಥವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳಬೇಕು.
2. ಸರ್ಕಾರದ ಆದೇಶ ಸಂಖ್ಯೆ: ನಅಇ 176 ಜಿಇಎಲ್ 2022 (ಭಾಗ-2) (ಇ) ದಿನಾಂಕ:23.11.2022 ರಲ್ಲಿ ಉಲ್ಲೇಖಿಸಿದ ಪೌರಕಾರ್ಮಿಕ ಎಂದರೆ ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳಲ್ಲಿ ಹಾಲಿ ನೇರಪಾವತಿ, ಕ್ಷೇಮಾಭಿವೃದ್ಧಿ, ಅಥವಾ ದಿನಗೂಲಿ ಅಥವಾ ಗುತ್ತಿಗೆ ಅಥವಾ ಸಮಾನ ಕೆಲಸಕ್ಕೆ ಸಮಾನ ವೇತನ ಅಥವಾ ಹೊರಗುತ್ತಿಗೆ ಅಥವಾ ಲೋಡರ್ಸ್ ಅಥವಾ ಕ್ಲೀನರ್ಸ್ ಆಧಾರದಲ್ಲಿ 2 ವರ್ಷಕ್ಕಿಂತ ಕಡಿಮೆ ಇಲ್ಲದಂತೆ ನಿರಂತರವಾಗಿ ಕೆಲಸ ನಿರ್ವಹಿಸುತ್ತಿರುವ ಹಾಗೂ ಈ ನಿಯಮ ಜಾರಿಗೆ ಬಂದ ದಿನಾಂಕದಲ್ಲಿಯೂ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಆದ್ಯತೆಯನ್ನು ನೀಡಲಾಗಿದೆ. ಅಂತಹ ನೌಕರರು ಅರ್ಜಿಗಳನ್ನು ಸಲ್ಲಿಸಲು ಅರ್ಹರಿರುತ್ತಾರೆ.

3. **ವಯೋಮಿತಿ:** ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದಂದು ಕೆಳಕಂಡ ವಯೋಮಿತಿ ಹೊಂದಿರತಕ್ಕದ್ದು.

| ವರ್ಗ | ಕನಿಷ್ಟ | ಗರಿಷ್ಟ |
|---|---|---|
| ಪ.ಜಾತಿ/ಪ.ಪಂ/ಪ್ರ-1, 2ಎ, 2ಬಿ, 3ಎ, 3ಬಿ ಸಾಮಾನ್ಯ ವರ್ಗ/ಇತರೆ | 18 | 55 |

4. ಅರ್ಜಿಗಳನ್ನು ಆಯಾ ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳಿಗೆ ನೇರವಾಗಿ ಸಲ್ಲಿಸಿ ಸ್ವೀಕೃತಿ ಪಡೆಯತಕ್ಕದ್ದು.
5. ಕೊನೆಯ ದಿನಾಂಕದ ನಂತರ ಹಾಕಿದ ಅರ್ಜಿಯನ್ನು ಮತ್ತು ಅಪೂರ್ಣವಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
6. ನೇಮಕಾತಿ ಬಗ್ಗೆ ಅಂತಿಮ ತೀರ್ಮಾನವನ್ನು ಅಧ್ಯಕ್ಷರು, ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿ ಚಿಕ್ಕಬಳ್ಳಾಪುರ ಜಿಲ್ಲೆ ಚಿಕ್ಕಬಳ್ಳಾಪುರ ಇವರು ಕಾಯ್ದಿರಿಸಿಕೊಂಡಿರುತ್ತಾರೆ.
7. ಅಭ್ಯರ್ಥಿಗಳು ನೇಮಕಾತಿ ಪ್ರಕ್ರಿಯೆಯಲ್ಲಿ ಕಛೇರಿ ಸಿಬ್ಬಂದಿ ಅಥವಾ ಸಿಬ್ಬಂದಿಯೇತರ ಮೂಲಗಳ ಮೂಲಕ ಯಾವುದೇ ರೀತಿಯ ಬಾಹ್ಯ ಬೆಂಬಲವನ್ನು ಪಡೆಯುವ ಪ್ರಯತ್ನ ಮಾಡಿದಲ್ಲಿ ಅಂತಹ ಅಭ್ಯರ್ಥಿಗಳ ನೇಮಕಾತಿ ಕೋರಿಕೆ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**ಜಾತಿ/ಮೀಸಲಾತಿ ಪ್ರಮಾಣ ಪತ್ರಗಳು :**

- ಮೀಸಲಾತಿ ಸೌಲಭ್ಯ ಅಪೇಕ್ಷಿಸುವ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರಗಳನ್ನು ಚಾಲ್ತಿಯಲ್ಲಿರುವ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ (ಸಂಬಂಧಪಟ್ಟ ತಹಶೀಲ್ದಾರ್‌ರಿಂದ) ಪಡೆದು ಸಲ್ಲಿಸುವುದು ಮತ್ತು ಮೂಲ ದಾಖಲೆಗಳನ್ನು ಪರಿಶೀಲಿಸುವ ದಿನಾಂಕದಂದು ಹಾಜರುಪಡಿಸತಕ್ಕದ್ದು.

**ಗ್ರಾಮೀಣ ಅಭ್ಯರ್ಥಿ:**

- ಗ್ರಾಮೀಣ ಅಭ್ಯರ್ಥಿ ಎಂದರೆ, ಗ್ರಾಮೀಣ ಮೀಸಲಾತಿಗೆ ಒಳಪಡುವ ಅಭ್ಯರ್ಥಿಗಳು ಗ್ರಾಮಾಂತರ ಪುದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು.

**ಇತರೆ ಅರ್ಹತಾ ಷರತ್ತುಗಳು :**

1. ಅರ್ಜಿದಾರರು ಭಾರತೀಯ ನಾಗರಿಕನಾಗಿರತಕ್ಕದ್ದು.
2. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವವಿರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತವಾಗಿರಬೇಕು, ದೈಹಿಕವಾಗಿ ಸಾಮರ್ಥ್ಯವಿರುವ ಬಗ್ಗೆ ಗ್ರೂಪ್ 'ಡಿ' (ಪೌರಕಾರ್ಮಿಕರ ನೌಕರರಿಗೆ ನಿಗಧಿಪಡಿಸಲಾದ ಕನಿಷ್ಟ ದೇಹದಾರ್ಢ್ಯತೆ ಹೊಂದಿರಬೇಕು) ಅರ್ಜಿ ಸಲ್ಲಿಕೆ ಹಾಗೂ ಆಯ್ಕೆ ಸಮಯದಲ್ಲಿ ಸರಕಾರಿ ವೈದ್ಯರ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
3. ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ಅಧ್ಯಕ್ಷರು, ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ ರವರು ಕಾಯ್ದಿರಿಸಿಕೊಂಡಿದೆ.

**ಕೆಳಕಂಡ ಮೂಲ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಿರುವುದು :**

- ಜನ್ಮ ದಿನಾಂಕವನ್ನು ನಮೂದಿಸಿರುವ ಜನನ ಪ್ರಮಾಣ ಪತ್ರ/ ಜನ್ಮ ದಿನಾಂಕವನ್ನು ತೋರಿಸುವ ಶೈಕ್ಷಣಿಕ ದಾಖಲೆಯ ಉದ್ಧೃತ ಭಾಗ/ಮತದಾರರ ಗುರುತಿನ ಚೀಟಿ/ಇತರೆ ಅಧಿಕೃತ ದಾಖಲೆ.

**ಅಭ್ಯರ್ಥಿಯು ನೇಮಕಾತಿ ಹೊಂದಲು ಅರ್ಹತೆಯ ದಾಖಲೆಗಳು:**

| | |
|---|---|
| ನೇರಪಾವತಿ ಪೌರಕಾರ್ಮಿಕ | ನೇರಪಾವತಿ ಆಧಾರದ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ನೇಮಕಾತಿ ಆದೇಶ ಅಥವಾ ನಡವಳಿ. |
| ಕ್ಷೇಮಾಭಿವೃದ್ಧಿ ಪೌರಕಾರ್ಮಿಕ | ಕರ್ನಾಟಕ ರಾಜ್ಯ ದಿನಗೂಲಿ ನೌಕರರ ಕಲ್ಯಾಣ ಕಾಯ್ದೆ 2012 (ಕರ್ನಾಟಕ ಕಾಯ್ದೆ 19/2013) ರನ್ವಯ ಅಧಿಸೂಚನೆಯಲ್ಲಿರುವ ನೌಕರರು. |
| ದಿನಗೂಲಿ ಪೌರಕಾರ್ಮಿಕ | ದಿನಗೂಲಿ ಆಧಾರದ ಕಾರ್ಯನಿರ್ವಹಿಸುತ್ತಿರುವ ಬಗ್ಗೆ, ಸಕ್ಷಮ ಪ್ರಾಧಿಕಾರದಿಂದ ನೇಮಕಾತಿ ಆದೇಶ ಅಥವಾ ನಡವಳಿ |
| ಸಮಾನ ಕೆಲಸಕ್ಕೆ ಸಮಾನ ವೇತನ ಪೌರಕಾರ್ಮಿಕ | ನೇಮಕಾತಿ ಆದೇಶ ಪತ್ರ ಅಥವಾ ನಡವಳಿ ಪೌರಾಯುಕ್ತರು/ಮುಖ್ಯಾಧಿಕಾರಿಗಳಿಂದ ಸೇವೆ ಸಲ್ಲಿಸುತ್ತಿರುವ ಅವಧಿಗೆ ಅನುಗುಣವಾಗಿ ಪ್ರಮಾಣ ಪತ್ರ ಮತ್ತು 2 ವರ್ಷ ಮೇಲ್ಪಟ್ಟ ವೇತನ ಪಡೆದ ದಾಖಲೆ |
| ಗುತ್ತಿಗೆ ಪೌರಕಾರ್ಮಿಕ | ನೇಮಕಾತಿ ಆದೇಶ ಪತ್ರ ಅಥವಾ ನಡವಳಿ ಪೌರಾಯುಕ್ತರು/ಮುಖ್ಯಾಧಿಕಾರಿಗಳಿಂದ ಸೇವೆ ಸಲ್ಲಿಸುತ್ತಿರುವ ಅವಧಿಗೆ ಅನುಗುಣವಾಗಿ ಪ್ರಮಾಣ ಪತ್ರ ಮತ್ತು 2 ವರ್ಷ ಮೇಲ್ಪಟ್ಟ ವೇತನ ಪಡೆದ ದಾಖಲೆ |
| ಹೊರಗುತ್ತಿಗೆ ಪೌರಕಾರ್ಮಿಕ | ಹೊರಗುತ್ತಿಗೆ ಪೌರಕಾರ್ಮಿಕ ಹುದ್ದೆಯಲ್ಲಿ 2 ವರ್ಷಗಳ ನಿರಂತರ ಸೇವೆ ಸಲ್ಲಿಸಿರಬೇಕು ಹಾಗೂ ಕಾರ್ಮಿಕ ರಾಜ್ಯ ವಿಮೆ (ಇಎಸ್ಐ) ಮತ್ತು ಭವಿಷ್ಯ ನಿಧಿ (ಪಿ.ಎಫ್) ಮತ್ತು 2 ವರ್ಷ ಮೇಲ್ಪಟ್ಟ ವೇತನ ಪಡೆದ ದಾಖಲೆ. |
| ಲೋಡರ್ & ಕ್ಲೀನರ್ | ಲೋಡರ್ಸ್ ಅಥವಾ ಕ್ಲೀನರ್ಸ್ ಹುದ್ದೆಯಲ್ಲಿ 2 ವರ್ಷಗಳ ನಿರಂತರ ಸೇವೆ ಸಲ್ಲಿಸಿರಬೇಕು ಹಾಗೂ ಕಾರ್ಮಿಕ ರಾಜ್ಯ ವಿಮೆ (ಇಎಸ್ಐ) ಮತ್ತು ಭವಿಷ್ಯ ನಿಧಿ (ಪಿ.ಎಫ್) ಮತ್ತು 2 ವರ್ಷ ಮೇಲ್ಪಟ್ಟ ವೇತನ ಪಡೆದ ದಾಖಲೆ. |

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2ಎ, ಪ್ರವರ್ಗ-2ಬಿ, ಪ್ರವರ್ಗ-3ಎ, 3ಬಿ, ಗಳ ಮೀಸಲಾತಿ ಪ್ರಮಾಣ ಪತ್ರಗಳು (ಮೀಸಲಾತಿ ಕೋರಿದಲ್ಲಿ).
- ಪ್ರ-2ಎ, ಪ್ರ-2ಬಿ, ಪ್ರ-3ಎ ಮತ್ತು 3ಬಿ ಗಳ ಮೀಸಲಾತಿ ಪ್ರಮಾಣ ಪತ್ರಗಳು 5 ವರ್ಷಗಳ ಚಾಲ್ತಿಯಲ್ಲಿರುವುದರಿಂದ, ಅಭ್ಯರ್ಥಿಗಳು ಪಡೆದಿರುವ ಪ್ರಮಾಣ ಪತ್ರವು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದವರೆಗೂ ಚಾಲ್ತಿಯಲ್ಲಿರುವಂತೆ ಪಡೆದಿರುವ ಪ್ರಮಾಣ ಪತ್ರವನ್ನು ಲಗತ್ತಿಸತಕ್ಕದ್ದು.
- ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ-1 ಮತ್ತು 2 ರಲ್ಲಿ (ಮೀಸಲಾತಿ ಕೋರಿದ್ದಲ್ಲಿ)
- ವಾಸ್ತವ್ಯ ದೃಢೀಕರಣ ಪತ್ರ.
- ಮೇಲ್ಕಂಡಂತೆ ನಿಗಧಿಪಡಿಸಿದ ಎಲ್ಲಾ ದಾಖಲೆಗಳು ಮತ್ತು ಅರ್ಹತಾ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಅರ್ಜಿಯೊಂದಿಗೆ ತಪ್ಪದೇ ಸಲ್ಲಿಸತಕ್ಕದ್ದು.
- ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಪ್ರಕಟಗೊಂಡ ಅಭ್ಯರ್ಥಿಗಳು ಮಾತ್ರ ಮೂಲ ದಾಖಲಾತಿಗಳ ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

**ಇತರೆ ಸೂಚನೆಗಳು:**

- ಅರ್ಜಿಯಲ್ಲಿ ತಪ್ಪು/ಸುಳ್ಳು ಮಾಹಿತಿ ನೀಡಿ ಉದ್ಯೋಗ ಪಡೆದಲ್ಲಿ ಅಂತಹ ಅಭ್ಯರ್ಥಿಗಳ ನೇಮಕಾತಿಯನ್ನು ರದ್ದುಗೊಳಿಸುವುದಲ್ಲದೆ, ಆ ಅಭ್ಯರ್ಥಿಯ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು.
- ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೇ ದಿನವು ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕವಾಗುವುದು.
- ಅರ್ಜಿಯಲ್ಲಿ ನೀಡುವ ವಿಳಾಸವೇ ಅಂತಿಮವಾಗಿದ್ದು, ಎಲ್ಲಾ ಪತ್ರ ವ್ಯವಹಾರಗಳನ್ನು ಅದೇ ವಿಳಾಸಕ್ಕೆ ಕಳುಹಿಸಿ ಕೊಡಲಾಗುವುದು.
- ಅಂತಿಮವಾಗಿ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಮುನ್ನ ಯಾವುದೇ ಹಂತದಲ್ಲಿ ಯಾವುದೇ ಕಾರಣ/ಮಾಹಿತಿ ನೀಡದೇ ಈ ನೇಮಕಾತಿ ಪ್ರಕ್ರಿಯೆಯನ್ನು ಮುಂದೂಡುವ ಅಥವಾ ರದ್ದುಪಡಿಸುವ ಅಥವಾ ವಿಧಿಸಲಾಗಿರುವ ಯಾವುದೇ ಷರತ್ತನ್ನು ಸಡಿಲಗೊಳಿಸುವ ಅಥವಾ ಹೆಚ್ಚುವರಿ ಷರತ್ತನ್ನು ವಿಧಿಸುವ ತುಂಬಲಾಗುವ ಹುದ್ದೆಗಳ ಸಂಖ್ಯೆಯನ್ನು **ಬದಲಾಯಿಸುವ/ನಿರ್ಣಯಿಸುವ ಅಧಿಕಾರವನ್ನು ಅಧ್ಯಕ್ಷರು, ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ ರವರು ಕಾಯ್ದಿರಿಸಿಕೊಂಡಿರುತ್ತಾರೆ**.
- ಅಭ್ಯರ್ಥಿಯ ಹೆಸರು ಅಂತಿಮ ಆಯ್ಕೆಪಟ್ಟಿಯಲ್ಲಿ ಸೇರ್ಪಡೆಯಾಗಿದೆ ಎಂಬುದರ ಆಧಾರದ ಮೇಲೆ ಅಭ್ಯರ್ಥಿಗೆ ನೇಮಕಾತಿ ಹಕ್ಕು ದೊರೆಯುವುದಿಲ್ಲ.
- ಆಯ್ಕೆ ಮಾಡಲಾದ ಅಭ್ಯರ್ಥಿಗಳು ನಿಗಧಿತ ಅವಧಿಯೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ಇದ್ದಲ್ಲಿ ಸದರಿ ಅಭ್ಯರ್ಥಿಯ ಬದಲಾಗಿ ಅದೇ ಪ್ರವರ್ಗದ ಮೀಸಲಾತಿಯಲ್ಲಿ ಹೆಚ್ಚುವರಿ ಪಟ್ಟಿಯಲ್ಲಿ ಆಯ್ಕೆಯಾಗಿರುವ ಮತ್ತೊಬ್ಬ ಅಭ್ಯರ್ಥಿಯನ್ನು ಪರಿಗಣಿಸಲಾಗುವುದು.
- ಆಯ್ಕೆ ಮಾಡಲಾದ ಅಭ್ಯರ್ಥಿಗಳ ಪಟ್ಟಿಯು ಗುರುತಿಸಲಾದ ಖಾಲಿ ಹುದ್ದೆಗಳು ಭರ್ತಿಯಾಗುವವರೆಗೆ ಅಥವಾ ಒಂದು ವರ್ಷದವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಚಾಲ್ತಿಯಲ್ಲಿರುತ್ತದೆ.
- ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ನಗರಾಭಿವೃದ್ಧಿ, ಕೋಶ, ಚಿಕ್ಕಬಳ್ಳಾಪುರ ಮತ್ತು ನಗರಸಭೆ ಚಿಕ್ಕಬಳ್ಳಾಪುರ/ ಚಿಂತಾಮಣಿ/ಶಿಡ್ಲಘಟ್ಟ/ಗೌರಿಬಿದನೂರು, ಪುರಸಭೆ ಬಾಗೇಪಲ್ಲಿ ಮತ್ತು ಪಟ್ಟಣ ಪಂಚಾಯಿತಿ ಗುಡಿಬಂಡೆ ಕಛೇರಿಯನ್ನು ಸಂಪರ್ಕಿಸತಕ್ಕದ್ದು.

ಅಧ್ಯಕ್ಷರು,
ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರ,
ಹಾಗೂ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ.

**ಪ್ರತಿಗಳನ್ನು ಅವಗಾಹನೆ/ಮಾಹಿತಿಗಾಗಿ ಸಲ್ಲಿಸಿದೆ:**

1. ಮಾನ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು ರವರಿಗೆ.
2. ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರಿಗೆ.
3. ಸಂಕಲನಾಧಿಕಾರಿ, ಸರ್ಕಾರಿ ಹೊರವಲಯ ಮುದ್ರಾಣಾಲಯ, ಆರ್‌ವಿ ಕಾಲೇಜ್ ಅಂಚೆ, ೮ನೇ ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು-೫೬೦೦೫೯, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು ಇವರಿಗೆ ಕಳುಹಿಸುತ್ತಾ, ಈ ಅಧಿಸೂಚನೆಯನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಹಾಗೂ ಪ್ರತಿಗಳನ್ನು ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರಿಗೆ ಒದಗಿಸಲು ಕೋರಿದೆ.
4. ಪೌರಾಯುಕ್ತರು, ನಗರಸಭೆ, ಚಿಕ್ಕಬಳ್ಳಾಪುರ/ಚಿಂತಾಮಣಿ/ಶಿಡ್ಲಘಟ್ಟ/ಗೌರಿಬಿದನೂರು/ ಮುಖ್ಯಾಧಿಕಾರಿ ಪುರಸಭೆ ಬಾಗೇಪಲ್ಲಿ/ ಪಟ್ಟಣ ಪಂಚಾಯಿತಿ ಗುಡಿಬಂಡೆ ಕಛೇರಿ ಇವರುಗಳು ಸೂಚನಾ ಫಲಕದಲ್ಲಿ ಮತ್ತು ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು ಸೂಚಿಸಿದೆ.
5. ಈ ಕಾರ್ಯಾಲಯದ ಸೂಚನಾ ಫಲಕಕ್ಕೆ.
6. ಕಛೇರಿ ಪ್ರತಿ.